

ಉಟ್ಕಂಬಿಡೋದಾ? ಸೋಮವಾರ ಹೊಸ ಸೀರೆ ಉಡ್ಬಾರ್ದು ಕಣ್ರೇ. ಅತ್ತೆ ನೋಡಿದ್ರೆ ಹಿಡಿಕುಂಟೆ ಕೈಗೆ ತಗಂತಾರೆ."

ಪ್ರತಿ ಸೀರೆಯ ಹಿಂದೆಯೂ ಒಂದೊಂದು ನೆನಪುಗಳು ಅನ್ನುವ ಹಾಗೆ ಮನದಲ್ಲಿ ಎಲ್ಲವೂ ಅಚ್ಚೊತ್ತಿಬಿಟ್ಟಿವೆ. 'ಸುಮಾರಿಗಿರೋದು...' ಎಂದು ಈಗ ಉಡುತ್ತಿರುವ ಸೀರೆ ಮೊದಲ ದೀಪಾವಳಿಗೆ ಗಂಡನ ಉಡುಗೊರೆ.

"ಏನೇ, ಇನ್ನೂ ಮುಗೀಲಿಲ್ವಾ ನಿಂದು? ರಾಹುಕಾಲ ಶುರುವಾಗೋಕೆ ಮುಂಚೆ ಹೊರಡು ಅಂತ ಹೇಳಿರ್ಲಿಲ್ವಾ? ಜಬ್ಬು ಅಂದ್ರೆ ಜಬ್ಬು" ಹೊರಗಿನಿಂದ ಕಿವಿಗೆ ಅಪ್ಪಳಿಸಿದ ಅಸಮಾಧಾನದ ದನಿ.

"ಆಯ್ತು..." ಅಂದಳು ಛಾಯಾ, ಅವಳ ಕಿವಿಗೇ ಬೀಳದಷ್ಟು ಸಣ್ಣ ದನಿಯಲ್ಲಿ. ಬಿಗಿಯುತ್ತಿದೆ ಕುಪ್ಪಸ. ಎರೆಯಲು ಕರೆದುಕೊಂಡು ಹೋಗುವ ಮುಂಚೆ ಮಗುವಿಗೆ ಹೊಟ್ಟೆ ಭರ್ತಿ ಹಾಲು ಕುಡಿಸಿದ್ದರೂ ಮತ್ತೆ ತುಂಬಿಕೊಂಡಿದೆ ಹಾಲು. ಮೊಲೆತೊಟ್ಟಿನ ಮೇಲೆ ಬಟ್ಟೆಯಲ್ಲಿ ದುಂಡನೆಯ ಕಲೆಯಾದರೆ ಅಸಂಯ್ಯ. ಯಾರಿಗಾದರೂ ಗೊತ್ತಾದರೆ ನಾಚಿಕೆಸಾವು. ಯಾರಿಗೆ ಬೇಕಾಗಿತ್ತು ಕಾಲೇಜು? ಕಲಿತಿದ್ದೆಲ್ಲಾ ಯಾವಾಗಲೋ ಗುಡ್ಡ ಹತ್ತಿ ಹೋಗಿದೆ. ಓನಾಮದಿಂದ ಶುರು ಮಾಡಬೇಕೇನೋ. ಎಸ್ಸೆಸ್ಸೆಲ್ಸಿ